

“ಅದಕ್ಕೇನಾದ್ರೂ ಸಾಕ್ಷಿ ಇದೆಯಾ?”

“ಸಂಪಂಗಿ ಮನೆಯ ಬೀಗ ಬದ್ಲಾಯಿಸಿದ್ದೇ ಸಾಕ್ಷಿ. ಮುತ್ತಪ್ಪನ ಬಳಿ ಆ ಮನೆಯ ನಕಲಿ ಕೀ ಇದ್ದಿರಬೇಕು. ಒಮ್ಮೆ ಅವ್ನು ಸಂಪಂಗಿ ಇಲ್ಲದಾಗ, ಆ ಮನೆಯೊಳಗೆ ಹೋಗಿದ್ದಿರಬೇಕು. ಆ ಹೊತ್ತಿಗೆ ಸಂಪಂಗಿ ವಾಪಾಸು ಬಂದ ಕಾಣುತ್ತೆ. ಅವರಿಬ್ಬರ ನಡುವೆ ಜೋರಾಗಿ ಜಗಳ ಆಗ್ತಿರುವಾಗ ನಾನು ಮರೆಯಲ್ಲಿ ನಿಂತು ನೋಡ್ತಾ ಅವ್ರ ಮಾತು ಕೇಳ್ಸಿಕೊಳ್ತಿದ್ದೆ. ಮುತ್ತಪ್ಪನು ‘ನೀನು ಮೋಸ ಮಾಡಿದ್ದೀ, ಕಾಸು ಮಡಗು’ ಅಂತ ಸಂಪಂಗಿಗೆ ದಬಾಯಿಸ್ತಾ ಇದ್ದ. ಸಂಪಂಗಿ ‘ಕಾಸು ಕೊಡೋದು ಬಾಕಿ ಏನೂ ಇಲ್ಲ. ಮನೆಯೊಳ್ಗೆ ಯಾಕ್ ಹೋದೆ?’ ಅಂತ ಕೂಗಾಡ್ತಿದ್ದ. ಜಗಳ ಜೋರಾಗ್ತಾ ಇದ್ದ ಹಾಗೆ ಸಂಪಂಗಿ ಜೇಬಿನಿಂದ ಪಿಸ್ತೂಲು ತೆಗೆದ. ಮುತ್ತಪ್ಪ ಹೆದ್ರಿ ಜಾಗ ಖಾಲಿ ಮಾಡ್ದ. ಆ ನಂತ್ರ ಸಂಪಂಗಿ ಮನೆಯ ಬೀಗ ಬದಲಾಯಿಸ್ದ. ನಾನು ಯಜಮಾನ್ರಿಗೂ ಈ ವಿಷ್ಯ ತಿಳಿಸ್ದೆ.”

ಈ ವಿಚಾರವನ್ನು ಹೊನ್ನರಾಜು ಹೇಳಿರಲಿಲ್ಲ!

“ಆಮೇಲೆ ಮುತ್ತಪ್ಪ ಸಂಪಂಗಿಯನ್ನು ಹೇಗಾದ್ರೂ ಓಡಿಸಬೇಕು ಅಂತ ನನ್ನ ಬಳಿ ಒಮ್ಮೆ ಹೇಳಿದ್ದ. ಎಸ್ಟೇಟಿನ ಕೆಲ್ಸಗಾರರು ಕೆಲವರು ಹೇಳ್ತಾರೆ ಮುತ್ತಪ್ಪ ಆ ಮನೆಯನ್ನು ಎಸ್ಟೇಟಿನ